ಎಂದ. ದಾಕ್ಷಾಯಿಣಿಯ ಮೈ ನಡುಗಿ ಒಂದು ಕ್ಷಣದಲ್ಲಿ ಬೆವರಿಟ್ಟಿತು. ಸುರೇಶ "ಇಲ್ಲದಿದ್ದರೂ ಸಾಲ ತೀರಿಸಲಾಗದೇ ತಲೆ ಕೆಟ್ಟು ಬಾಟ್ಲಿ ಹಿಡಿದು ಕುಡೀತಾ ಕೂತ್ರೆ ಮಹಾ ಕಷ್ಟ" ಎಂದ ಸುರೇಶ. ದಾಕ್ಷಾಯಿಣಿ ಉಗುಳು ನುಂಗಿದಳು. "ಬರ್ತೀವಿ ಅತ್ತಿಗೆ" ಎನ್ನುತ್ತ ಎಲ್ಲರೂ ಹೊರಡೆದರು. ಬೀಳ್ಕೊಡಲು ಶಿವಾನಂದ ಕೂಡ ಹೊರಟ.

"ಕೇಳಬೇಕಾದ್ದನ್ನು ಕೇಳಲೇ ಇಲ್ಲವಲ್ಲ" ಎಂದು ತೀಕ್ಷ್ಣವಾಗಿ ನೋಡುತ್ತ ಪಿಸುನುಡಿದಳು ದಾಕ್ಷಾಯಿಣಿ. ಅವಳಲ್ಲಡಗಿದ್ದ ಹಟ ಇನ್ನೂ ಹೆಡೆಎತ್ತಿ ಫೂತ್ಕರಿಸುತ್ತಿತ್ತು. ಅವಳ ನೋಟವನ್ನು ಅಷ್ಟೇ ಶಾಂತವಾಗಿ ತುಂಡರಿಸುತ್ತ "ನನ್ನ ಮಿತಿ ಇಷ್ಟೇ ದಾಕ್ಷಾ. ಅಲ್ಪತೃಪ್ತ ನಾನು. ನಿನಗೋಸ್ಕರ ಮನೆ ತುಂಬ ಆಧುನಿಕ ಸೌಕರ್ಯಗಳನ್ನೆಲ್ಲ ತುಂಬಿಕೊಂಡು ಸಾಲದ ಹೊರೆ ಹೊತ್ತು ಸಾಕಾಗಿದೆ. ಇನ್ನು ನಾನು ನನ್ನ ಎಲ್ಲೆ ಮೀರುವುದಿಲ್ಲ. ನಿನಗೆ ಈ ಜೀವನ ರುಚಿಸದಿದ್ದರೆ ತೌರಿಗೆ ಹೋಗುವುದಾದರೆ ಹೋಗಬಹುದು. ನಿನ್ನ ಪರ್ಸಿನಲ್ಲಿ ಆಟೋಕ್ಕೆ ದುಡ್ಡಿದೆ" ಎಂದವನೇ ಗೆಳೆಯರನ್ನು ಕಳುಹಿಸಲು ಹೊರನಡೆದ ಶಿವಾನಂದ.

ಒಮ್ಮೆಲೆ ಸ್ತಂಭೀಭೂತಳಾದಳು ದಾಕ್ಷಾಯಿಣಿ. ಇಷ್ಟು ದಿನ ಬ್ರಹ್ಮಾಸ್ತ್ರದಂತೆ ಕೆಲಸ ಮಾಡುತ್ತಿದ್ದ ತೌರಿಗೆ ಹೋಗುವ ಬೆದರಿಕೆ ಈಗ ಮಕಾಡೆ ಮಲಗಿತ್ತು. ಒಂದೇ ಮಾತಿನಲ್ಲಿ 'ಹೋಗುವುದಾದರೆ ಹೋಗು' ಎಂದುಬಿಟ್ಟನಲ್ಲ. ಕಂಗಳು ತುಂಬಿ ಬಂದವು. ಮರುಕ್ಷಣ ಥರಗುಟ್ಟಿದಳು. ತನ್ನ ತೌರಿನ ಕತೆ ತನಗೇ ಗೊತ್ತು. ಅಲ್ಲಿ ಅಮ್ಮ, ಅಪ್ಪನೇ ಮಗ, ಸೊಸೆಗೆ ಬಾಗಿ ನಡೆದುಕೊಳ್ಳುತ್ತಿದ್ದಾರೆ. ತಮ್ಮ ಹೆಂಡತಿಯ ಕೈಗೊಂಬೆ. ಎರಡು ಮಕ್ಕಳೊಡನೆ ಅಲ್ಲಿಗೆ ಹೋಗಿ ಕಾರಣ ಕೇಳಿದರೇನು ಹೇಳುವುದು. 'ದೊಡ್ಡ ಕಾರು' ಎಂದರೆ ಎಲ್ಲರೂ ನಕ್ಕಾರು. ಕೆನ್ನೆಗೆ ಕೈ ಇಟ್ಟುಕೊಂಡು ಮೌನವಾಗಿ ಯೋಚಿಸುತ್ತ ಕುಳಿತಳು. ತಮ್ಮ ನೆಲ, ನೆಲದ ಅಂಚೇ ಹಿತವೆನಿಸಿತು. ಶಿವಾನಂದ ತಿರುಗಿ ಬಂದಾಗ "ಆ ಮಾಡೆಲ್, ಈ ಮಾಡೆಲ್, ಹೈ ಎಂಡ್ ಗಾಡಿ ನಮಗೇತಕ್ಕಪ್ಪ? ನಾಲ್ಕೂ ಜನರನ್ನು ಕರೆದೊಯ್ದು ಅವಶ್ಯಕತೆ ಪೂರೈಸಿದರೆ ಸಾಕಲ್ಲ. ದೊಡ್ಡ ಕಾರು ಎಂದು ಕೇಳಬೇಡಿ" ಎಂದು ಮಕ್ಕಳಿಗೆ ತಾಕೀತು ಮಾಡುತ್ತಿದ್ದಳು. ಅವು ಯಥಾಪ್ರಕಾರ ಏನೂ ತಿಳಿಯದೇ ಪಿಳಿಪಿಳಿ ನೋಡುತ್ತಿದ್ದವು. ಈ ಕೆಲಸ ಮೊದಲೇ ಮಾಡಬೇಕಾಗಿತ್ತೆನಿಸಿ ಶಿವಾನಂದ ಮುಗುಳ್ನಕ್ಕ. ಕಾರು ಹೊಸ ಹುರುಪಿನಿಂದ ನಾಲ್ವರನ್ನೂ ಹೊತ್ತು ಹೊರಡಲು ಸಿದ್ಧವಾಯಿತು.


## ಮಧುರಾ ಕರ್ಣಮ್

ಲೇಖಕಿ ಬೆಳಗಾವಿಯವರು. ಬಿ.ಎಸ್ಸಿ, ಎಲ್ಎಲ್.ಬಿವರೆಗೆ ವಿದ್ಯಾಭ್ಯಾಸ. ಕತೆ, ಹಾಸ್ಯ, ಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...' ಆಕ್ರಮಣ ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.